ಕಾರ್ಯಕ್ರಮಗಳಲ್ಲಿ ನಿಜವಾದ ಸಭಾರಂಜನೆ ಒದಗಿಸುವವರು ನಿರೂಪಕರು. ಅವರನ್ನು ಕಂಡಾಗಲೆಲ್ಲ ಬಾಳಿನಲ್ಲಿ ಪಟ್ಟ ಮತ್ತು ಪಡಲಿರುವ ದುಗುಡವೆಲ್ಲ ಮರೆತುಹೋಗುತ್ತದೆ. ನೋಡಲು ಕೊಂಚ ಲಕ್ಷಣವಾಗಿರುವ ಅವರು, ಅಗತ್ಯಕ್ಕಿಂತ ಹೆಚ್ಚು ಸಿಂಗರಿಸಿಕೊಂಡು, ಮುಂಗುರುಳನ್ನು ಸುಖಾಸುಮ್ಮನೆ ಹಿಂತಳ್ಳುತ್ತ ವೈಯಾರ ಮಾಡುವರು; ಎಲ್ಲೆಲ್ಲಿಂದಲೊ ಹೆಕ್ಕಿತಂದ ಕೊಟೇಶನುಗಳನ್ನು ಬಾಂಬಿನಂತೆ ಎಸೆಯುವರು–'ಹಸಿರುಗಿಡದ ಮೇಲೆ ಮೊಸರು ಚೆಲ್ಲಿದಂತೆ ಮಾತನಾಡಿದ ಅಥಿಥಿಗಳು', 'ಕಾರ್ಯಕ್ರಮದ ಕೇಂದ್ರ ಬಿಂದುವಾಗಿರುವ ವಿಧ್ವಾಂಸರು', 'ಲಕ್ಷ ನಕ್ಷತ್ರಗಳ ನಡುವೆ ಬೆಳಗುವ ಚಂದ್ರನಂತಿರುವ ಅಚ್ಚುಮೆಚ್ಚಿನ ಪ್ರಿನ್ಸಿಪಾಲರು', 'ಭೀಷ್ಮ ಪಿತಾಮಹರಂತಿರುವ ಆಡಳಿತ ಮಂಡಳಿಯ ಚೇರಮನ್ನರು' ಇತ್ಯಾದಿ. ಈ ಉಪಮೆರೂಪಕಗಳಲ್ಲಿ ಅಲ್ಪ–ಮಹಾಪ್ರಾಣ ಅದಲುಬದಲು ಸರ್ವೇ ಸಾಮಾನ್ಯ. ಅದರಲ್ಲೂ 'ವಿದ್ವಾಂಸರು' ಶಬ್ದವನ್ನು 'ಧ್ವಂಸ' ದನಿ ಹೊರಡುವಂತೆ ಬೇಕೆಂದೇ ಉಚ್ಚರಿಸುತ್ತಾರೆಂದು ನನಗೆ ಗುಮಾನಿ. ಒಮ್ಮೆ ಒಬ್ಬ ನಿರೂಪಕಿ 'ಬೆಲ್ಲಕ್ಕೆ ಇರುವೆ ಮುತ್ತುವಂತೆ ಸಜ್ಜನರು ಸೇರಿರುವ ಈ ಶುಭಸಂಜೆಯ ಸಭೆಯಲ್ಲಿ' ಎಂದು ಶುರುಮಾಡಿದಳು. 'ಹೊರಗೆ ಬಾ ಕಚ್ಚತೀನಿ' ಎಂದು ಮೂಲೆಯಿಂದ ಸಣ್ಣದನಿ ಚಿಮ್ಮಿತು. ಕೆರಳಿದ ನಿರೂಪಕಿ, 'ಮಗನಾ, ಇಲ್ಲೇ ಬಂದು ಕಚ್ಚು ಸತುವಿದ್ದರ. ಹಂಗ ಹೆಬ್ಬೆಟ್ಟಾಗ ಹೊಸಕಿ ಹಾಕ್ತೀನಿ' ಎಂದಳು. ಅಜ್ಞಾತದನಿಯ ಒಡೆಯ ಛಡಾ ಸವಾಲನ್ನು ಸ್ವೀಕರಿಸಲಿಲ್ಲ. ಪುಷ್ಪಸಮರ್ಪಣೆ ಸ್ವಾಗತಗಳಿಗೆ ಗಂಟೆಹೊತ್ತು ಹಾಳುಮಾಡುವ ಈ ನಿರೂಪಕರು, 'ನಮ್ಮ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದವರು. ಕೊನೆಯ ಬಸ್ಸು ತಪ್ಪಿಹೋದರೆ ಕಷ್ಟವಾಗುತ್ತದೆ. ಅತಿಥಿಗಳು ಎರಡು ಮಾತಾಡಬೇಕೆಂದು ಕೋರುವೆ' ಎಂದು ಭಾಷಣಕ್ಕೆ ಎರಡು ಬಗೆಯುವರು. ಬಸ್ಸಿನ ಧ್ಯಾನದಲ್ಲಿ ಕುಳಿತವರಿಗೆ ಏನು ತಾನೇ ಮಾತನಾಡಬಹುದು?

ಇಂತಹ ಚಿಕ್ಕಪುಟ್ಟ ತಪ್ಪುಗಳನ್ನೆಲ್ಲ ಹೊಟ್ಟೆಗೆ ಹಾಕಿಕೊಳ್ಳಬಹುದು. ಭಾಷಣ ಸಾರಾಂಶೀಕರಿಸುವುದನ್ನು ಮಾತ್ರ ಮನ್ನಿಸಲಾಗದು. ಹೆಚ್ಚಿನ ಸಲ ನಾವಾಡದ ಮಾತುಗಳನ್ನೇ ನಮ್ಮ ಬಾಯಿಗೆ ತುರುಕಲಾಗುತ್ತದೆ. ನಾನೊಮ್ಮೆ 'ಸಾರ್ವಜನಿಕರ ತೆರಿಗೆ ಹಣದಲ್ಲಿ ಕಲಿತು ಎಂಜಿನಿಯರ್, ಡಾಕ್ಟರ್ ಆಗಿ ವಿದೇಶದಲ್ಲಿ ಸೇವೆ ಸಲ್ಲಿಸುವುದು ಎಷ್ಟು ಸರಿ?' ಎಂಬ ಪ್ರಶ್ನೆ ಎತ್ತಿಕೊಂಡು, ಪ್ರತಿಭಾ ಪಲಾಯನದ ಬಗ್ಗೆ ಮಾತನಾಡಿದೆ. ನಿರೂಪಕರು, 'ಭಾರತದ ಭವಿಷ್ಯದ ದೃಷ್ಟಿಯಿಂದ ಪ್ರತಿಭಾವಂತರು ವಿದೇಶಕ್ಕೆ ಹೋಗುವುದು ಎಷ್ಟು ಮಹತ್ವದ ಕಾರ್ಯವೆಂದು ನಮಗೆಲ್ಲ ಮನ ಮುಟ್ಟುವಂತೆ ಹೃದಯಕ್ಕೆ ತಟ್ಟುವಂತೆ ತಿಳಿಸಿಕೊಟ್ಟ ಅತಿಥಿಗಳಿಗೆ ವಂದನೆ ಅಭಿನಂದನೆ' ಎಂದುಬಿಟ್ಟರು. ಭಾಷಣಕಾರರ ಪಾಲಿಗೆ ಭಯೋತ್ಪಾದಕರೆಂದರೆ ಈ ಅಧಿಕಪ್ರಸಂಗಿಗಳೇ. ಕೆಲವೊಮ್ಮೆ ಕಾಲೇಜಿನ ಆಡಳಿತ ಮಂಡಳಿಯ ಚೇರಮನ್ನರು ಸಭಾಧ್ಯಕ್ಷರಾಗಿ ಅಧಿಕಪ್ರಸಂಗ ನಡೆಸಿ ಕೊಡುವುದುಂಟು. ಅವರ ಅಸಂಬದ್ಧ ಮಾತು, ಹಳಸಲು ಜೋಕು, ಕೃತಕ ಪ್ರಾಸಬದ್ಧ ಹೇಳಿಕೆಗಳು ಅಮೂಲ್ಯ ಕಾಲವನ್ನು ಗೆದ್ದಲಿನಂತೆ ತಿನ್ನುತ್ತವೆ. ಅಂತಹದೊಂದು ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದ ಗೆಳೆಯನಿಗೆ, 'ಏನಪ್ಪಾ ಕತೆಯಿದು?' ಎಂದೆ. 'ಅಯ್ಯೋ ಇವತ್ತು ಪರವಾಗಿಲ್ಲ. ನಿನ್ನದೃಷ್ಟ, ಬೇಗ ಮುಗೀತು. ನಮ್ಮವಸ್ಥೆ ಹೇಳು. 25 ವರ್ಷದಿಂದ ಕೇಳ್ತಾನೇ ಇದೀವಿ' ಎಂದ. ಕೆಲವು ಸಾಹಿತ್ಯ ಸಂಘಗಳಲ್ಲಿ ಸ್ಥಳೀಯ ಖ್ಯಾತ ಭಾಷಣಕಾರರು ಮೈಕಿನ ಮುಂದೆ ಬಂದರೆ, ಅರ್ಧಕರ್ಧ ಸಭೆ ಧೂಮಪಾನಕ್ಕೆ, ಜಲಬಾಧೆ ತೀರಿಸಲು, ಬೈಟುಚಹ ಎಂದು ಸ್ವಯಂ ಇಂಟರ್‌ವೆಲ್ ತೆಗೆದುಕೊಳ್ಳುವ ಪರಿಪಾಠವಿದೆ. ಕೇಳಿದರೆ, 'ಒಂದೇ ಭಾಷಣ.